# ಭಾಗ 2:

## ಯೇಸುವಿನ ಹಿಂದಿರುಗುವಿಕೆ

ಬೈಬಲಿನ ಮುಖ್ಯ ಪ್ರಸ್ತಾಪವನ್ನು ಮೂರು ಸ್ಪಷ್ಟೋಕ್ತಿಗಳಲ್ಲಿ ಸಾರಾಂಶವಾಗಿ ಹೇಳಬಹುದು: "ಯೇಸುವು ಬರುವನು," "ಆತನು ಬಂದನು," ಮತ್ತು "ಆತನು ಪುನಃ ಬರಲಿಕ್ಕಿದ್ದಾನೆ." ಆತನು ತಿರಿಗಿ ಬರುವುದು ದೊಡ್ಡದಾಗಿ, ಕಂಪನಗೊಳಿಸುವ, ಗಂಭೀರವಾದ ಹೊಸ ಒಡಂಬಡಿಕೆಯ ಬೋಧನೆಯಾಗಿದೆ. ಬಹುಶಃ ಕ್ರೈಸ್ತ ಬೋಧನೆ. ಬೇರೆ ಯಾವುದೇ ವಿಷಯವು ಹೆಚ್ಚು ಆಸಕ್ತಿಯನ್ನೂ ಕುತೂಹಲವನ್ನೂ ಹುಟ್ಟಿಸಿರುವದಿಲ್ಲ.

ಆತನು ಹಿಂದಿರುಗಿ ಬರುವದರ, "ಹೇಗೆ?"; "ಯಾವಾಗಾ?"; "ಎಲ್ಲಿ?"; ಮತ್ತು "ಯಾಕೆ?" ಎಂಬವುಗಳಿಗೆ ವಿಪುಲವಾದ ವಿವರಗಳು ಕೊಡಲ್ಪಟ್ಟಿರುತ್ತವೆ. ಈ ಪ್ರಶ್ನೆಗಳಿಗೆ ಉತ್ತರ ಕೊಡಲು ನಮ್ಮಲ್ಲಿ ಮಾಹಿತಿ ಇರುತ್ತದೆ. ಆದರೆ ನಮ್ಮ ಕುತೂಹಲವನ್ನು ಸಾಕಷ್ಟು ತೃಪ್ತಿಪಡಿಸಲಿಕ್ಕೆ ಇಲ್ಲವೇ ಪ್ರಶ್ನೆಗಳಿಗೆ ಸಂಬಂಧಿಸಿದ ಎಲ್ಲಾ ಸಾಧ್ಯತೆಗಳನ್ನು ವಿವರಿಸಲು ಸಾಕಷ್ಟು ಇರುವದಿಲ್ಲ.

ವಿಷಯವು ಆಸಕ್ತಿಯುಳ್ಳದ್ದೂ ನಮ್ಮ ಯೋಚಿಸುವಿಕೆಗೆ ಯೋಗ್ಯವಾದದ್ದೂ ಆಗಿದ್ದಾಗ್ಯೂ ಯೇಸುವಿನ ಎರಡನೆಯ ಬರೋಣದ ಬಗ್ಗೆ ಸಂಬಂಧಿಸಿ ಪ್ರತಿಯೊಂದನ್ನು ಅರ್ಥಮಾಡಿಕೊಳ್ಳುವುದು ನಮ್ಮ ರಕ್ಷಣೆಗೆ ಅಗತ್ಯವಾಗಿರುವದಿಲ್ಲ. ಆತನು ಹಿಂದಿರುಗಿ ಬರುವದಕ್ಕಾಗಿ ನಾವು ಸಿದ್ಧರಾಗಲು ಏನು ಮಾಡಬೇಕೆಂಬುದರ ಜ್ಞಾನವು ನಮಗೆ ಹೆಚ್ಚು ಮುಖ್ಯವಾದದ್ದಾಗಿದೆ. ಆತನ ಬರೋಣದ ಸುತ್ತಲಿರುವ ಮತ್ತು ಹಿಂಬಾಲಿಸುವ ಘಟನೆಗಳ ಬಗ್ಗೆ ಇರುವದೆಲ್ಲವನ್ನು ನಾವು ತಿಳಿದು ಕೊಂಡರೆ, ಆದರೆ ಆತನು ಬರುವಾಗ ಆತನು ನಮ್ಮನ್ನು ಸ್ವೀಕರಿಸುವಂತೆ ಜೀವಿಸದಿದ್ದರೆ, ಎಲ್ಲಾ ನಮ್ಮ ಜ್ಞಾನವು ಬೆಲೆಯುಳ್ಳದ್ದಾಗಿರುವದಿಲ್ಲ.

ಆತನು ಹಿಂದಿರುಗಿ ಬರುವಾಗ ಸಿದ್ಧರಾಗಿರುವದಕ್ಕಾಗಿ ನಾವು ಪ್ರೇರೇಪಿಸಲ್ಪಡುವಂತೆ, ಆತನು ಹಿಂದಿರುಗುವಾಗ ಏನು ಸಂಭವಿಸುವುದು ಎಂಬದರ ಬಗ್ಗೆ ಬಹುಶಃ ಯೇಸುವು ಕೆಲವೊಂದನ್ನು ಹೇಳಿರಬಹುದು, "ಹೀಗಿರಲಾಗಿ ನಿಮ್ಮ ಕರ್ತನು ಬರುವ ದಿನವು ನಿಮಗೆ ಗೊತ್ತಿಲ್ಲವಾದದರಿಂದ ಎಚ್ಚರವಾಗಿರ್ರಿ" (ಮತ್ತಾಯ 24:42) ಎಂದು ಯೇಸು ಹೇಳಿದನು.

ಈ ಭಾಗದಲ್ಲಿ, ಯೇಸುವು ಹಿಂದಿರುಗಿ ಬರುವಾಗ ಏನು ಸಂಭವಿಸುವುದು ಎಂಬುದನ್ನು ಅಭ್ಯಸಿಸುವೆವು, ಆತನು ಭೂಲೋಕದ ಮೇಲೆ ಆಳುವನೋ ಇಲ್ಲವೋ ಎಂಬುದನ್ನು ನಿರ್ಧರಿಸುವದನ್ನು ಹುಡುಕುವೆವು, ಪುನರುತ್ಥಾನದಲ್ಲಿ ಏನು ಒಳಗೊಂಡಿರುವದೆಂಬುದನ್ನು ಪರೀಕ್ಷಿಸುವೆವು ಮತ್ತು ನ್ಯಾಯ ತೀರ್ವಿಕೆಯ ದಿನವು ಹೇಗಿರುವದೆಂಬುದನ್ನು ವಿಚಾರಿಸುವೆವು.

© 2009 Truth for Today